# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 973(1116) |
| ಸದಸ್ಯರ ಹೆಸರು : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ: | 15.12.2023 |
| ಉತ್ತರಿಸುವವರು : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

******

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಕಾಯಿದೆ ಇಲಾಖಾ ನಿಯಮಗಳು ಮತ್ತು ತಂತ್ರಾಂಶಗಳ ನಡುವೆ ವೈರುಧ್ಯಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಾಯಿದೆಗೆ ಪೂರಕವಾಗಿ ಇಲಾಖಾ ನಿಯಮಗಳನ್ನು ರಚಿಸ ಬೇಕಾಗಿದ್ದು ಇವೆರಡಕ್ಕೂ ಸಹಕಾರಿಯಾಗಿ ತಂತ್ರಾಂಶಗಳು ಇರಬೇಕಾಗಿದ್ದು ಪ್ರಸ್ತುತ ಇವುಗಳ ನಡುವೆಯಿರುವ ಸಮನ್ವಯತೆಯ ಕೊರತೆಯನ್ನು ಸರಿಪಡಿಸಲು ಸರ್ಕಾರದ ಕ್ರಮಗಳೇನು; (ವಿವರ ನೀಡುವುದು) | ಬಂದಿಲ್ಲ.<br><br>ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ತಂತ್ರಾಂಶಗಳು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, 1993 ಮತ್ತು ನಿಯಮಗಳನ್ವಯ ಅಭಿವೃದ್ಧಿಪಡಿಸಿ, ಅನುಷ್ಠಾನಗೊಳಿಸಲಾಗುತ್ತಿದೆ. |
| (ಆ) | ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯಲ್ಲಿ ಇಲಾಖಾ ನಿಯಮಗಳನ್ನು ರಚಿಸುವಾಗ ಮತ್ತು ತಂತ್ರಾಂಶಗಳನ್ನು ಅಭಿವೃದ್ಧಿಪಡಿಸುವಾಗ | ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯಲ್ಲಿ ಇಲಾಖಾ ನಿಯಮಗಳನ್ನು ರಚಿಸುವಾಗ ಮತ್ತು ತಂತ್ರಾಂಶಗಳನ್ನು ಅಭಿವೃದ್ಧಿಪಡಿಸುವಾಗ ತಳಹಂತದ ಅಧಿಕಾರಿ/ಸಿಬ್ಬಂದಿಗಳನ್ನು ಬಳಸಿಕೊಳ್ಳಲಾಗುತ್ತಿದೆ.<br>**ತಂತ್ರಾಂಶಗಳನ್ನು ಅಭಿವೃದ್ಧಿಪಡಿಸುವಾಗ ಅನುಸರಿಸುತ್ತಿರುವ ಕಾರ್ಯವಿಧಾನಗಳು:** |

| | | |
|---|---|---|
| | ಅನುಸರಿಸುತ್ತಿರುವ ಕಾರ್ಯವಿಧಾನಗಳೇನು; ತಳಹಂತದ ಅಧಿಕಾರಿ/ಸಿಬ್ಬಂದಿಗಳನ್ನು ಬಳಸಿಕೊಳ್ಳಲಾಗಿದೆಯೇ; (ವಿವರ ನೀಡುವುದು) | FRS ದಾಖಲೆಗಳನ್ನು ತಯಾರಿಸುವಾಗ ಮಾಡ್ಯೂಲ್ ಗೆ ಅನುಗುಣವಾಗಿ ರಾಜ್ಯ, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದ ನುರಿತ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಅವಶ್ಯಕತೆಗಳನ್ನು ಕಲೆಹಾಕಲಾಗುತ್ತದೆ ಹಾಗೂ ಸದರಿಯವರು ನೀಡಿದ ಅವಶ್ಯಕತೆಗಳನ್ನು ಇಲಾಖಾ ಕಾಯಿದೆ ಮತ್ತು ನಿಯಮಗಳಿಗೆ ಪೂರಕವಾಗಿದೆ ಎಂಬುದನ್ನು ಖಚಿತಪಡಿಸಿಕೊಂಡು, ಕಾಯಿದೆ ಮತ್ತು ನಿಯಮಗಳಿಗೆ ಪೂರಕವಾಗದೇ ಇದ್ದಲ್ಲಿ ಅಂತಹ ಬದಲಾವಣೆಗಳನ್ನು ಕಾಯಿದೆ ಮತ್ತು ನಿಯಮಗಳಲ್ಲಿ ಕಾಲಕಾಲಕ್ಕೆ ತರಲಾಗುತ್ತಿದೆ.<br><br>ಅಭಿವೃದ್ಧಿಪಡಿಸಿದ ಮಾಡ್ಯೂಲ್ ಮತ್ತು ತಂತ್ರಾಂಶಗಳನ್ನು ರಾಜ್ಯ, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದ ನುರಿತ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಒಳಗೊಂಡಂತೆ ತಂಡವನ್ನು ರಚಿಸಿ, ಸವಿವರವಾಗಿ ಮಾಡ್ಯೂಲ್‌ಗಳನ್ನು test ಮಾಡಿ, ಪ್ರಾಯೋಗಿಕವಾಗಿ ಕೆಲವೊಂದು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>ಪ್ರಾಯೋಗಿಕವಾಗಿ ಅನುಷ್ಠಾನ ಗೊಳಿಸುವ ವೇಳೆ ಬಂದಂತಹ ಸಲಹೆಗಳನ್ನು ಅಳವಡಿಸಲಾಗುತ್ತಿದೆ. ಎಲ್ಲಾ ಸಲಹೆಗಳನ್ನು ಅಳವಡಿಸಿದ ನಂತರ ಮಾಡ್ಯೂಲ್ ಮತ್ತು ತಂತ್ರಾಂಶಗಳನ್ನು ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. |
| (ಇ) | ಆರ್‌ಡಿಪಿಆರ್ ಇಲಾಖೆಯ ಮುಖ್ಯ ತಂತ್ರಾಂಶಗಳು ಯಾವುವು; ಪಂಚತಂತ್ರ ಹಿಂದಿನ ಆವೃತ್ತಿ ಮತ್ತು ಪಂಚತಂತ್ರ 2.0ರ ನಡುವಿನ ವ್ಯತ್ಯಾಸವೇನು; (ವಿವರ ನೀಡುವುದು) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮುಖ್ಯ ತಂತ್ರಾಂಶಗಳು:<br>➢ ಪಂಚತಂತ್ರ 2.0<br>➢ ಬಾಪೂಜಿ ಸೇವಾ ಕೇಂದ್ರ<br>➢ ಗಾಂಧಿ ಸಾಕ್ಷಿ ಕಾಯಕ 2.0<br>➢ ಇ-ಸ್ವತ್ತು<br>ಹಿಂದಿನ ಆವೃತ್ತಿ ಮತ್ತು ಪಂಚತಂತ್ರ 2.0ರ ನಡುವಿನ ವ್ಯತ್ಯಾಸದ ವಿವರಗಳನ್ನು **ಅನುಬಂಧ**ದಲ್ಲಿ ಲಗತ್ತಿಸಿದೆ. |
| (ಈ) | ಪಂಚತಂತ್ರ 2.0 ತಂತ್ರಾಂಶದಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಮುಖ್ಯ ಮಾಹಿತಿ ದಾಖಲಿಸುವ ಸಿಬ್ಬಂದಿಯಾರಿದ್ದಾರೆ; ಹೆಚ್ಚಿನ ಎಲ್ಲಾ ಸೇವೆಗಳ ಪ್ರಥಮ ಮಾಹಿತಿ ದಾಖಲಿಸುವ ಸಂಸ್ಕರಿಸುವ ಜವಾಬ್ದಾರಿಯನ್ನು ಪೂರ್ಣವಾಗಿ ಪಿಡಿಒಗೆ ನೀಡಿದ ಕಾರಣ ಪಿಡಿಒಗೆ ಇತರ | ಸೇವೆಗಳ ಪ್ರಥಮ ಮಾಹಿತಿ ದಾಖಲಿಸಲು ಮತ್ತು ಅರ್ಜಿಗಳನ್ನು ಸ್ವೀಕರಿಸಿ, ಅರ್ಜಿಗಳ ವಿವರಗಳನ್ನು ದಾಖಲಿಸಲು ಗ್ರಾಮ ಪಂಚಾಯತಿಯ ಡೇಟಾ ಎಂಟ್ರಿ ಆಪರೇಟರ್ ಗಳಿಗೆ ಅವಕಾಶವನ್ನು ನೀಡಲಾಗಿದೆ.<br><br>ಅದರಂತೆ, ಗ್ರಾಮ ಪಂಚಾಯತಿಗಳ ಕಾರ್ಯದರ್ಶಿಗಳಿಗೆ ಅರ್ಜಿಗಳೊಂದಿಗೆ ಒದಗಿಸಲಾದ ದಾಖಲೆಗಳನ್ನು ಪರಿಶೀಲನೆ ಹಾಗೂ ಕ್ಷೇತ್ರ ಪರಿಶೀಲನೆ ಮಾಡುವ ಜವಾಬ್ದಾರಿಯನ್ನು ತಂತ್ರಾಂಶದಲ್ಲಿ ನೀಡಲಾಗಿದೆ ಹಾಗೂ ಅರ್ಜಿಯನ್ನು ಸಂಸ್ಕರಿಸಿ ಅನುಮೋದಿಸುವ ಜವಾಬ್ದಾರಿಯನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ನೀಡಲಾಗಿದೆ. |

| | | |
|---|---|---|
| | ಕ್ಷೇತ್ರಕಾರ್ಯ ಮಾಡುವಲ್ಲಿ ಹಾಗೂ ಪಿಡಿಒ ಇಲ್ಲದಾಗ ಯಾವುದೇ ಆನ್ ಲೈನ್ ಸೇವೆಯಲ್ಲಿ ವ್ಯತ್ಯಯವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಗ್ರಾಮ ಪಂಚಾಯತಿಯ ಇತರ ಸಿಬ್ಬಂದಿ/ಅಧಿಕಾರಿಗೆ ಪ್ರಥಮ ಮಾಹಿತಿ ದಾಖಲಿಸುವ ಅವಕಾಶ ನೀಡಿ, ಸಂಸ್ಕರಿಸುವ ಜವಾಬ್ದಾರಿಯನ್ನು ಪೂರ್ಣವಾಗಿ ಪಿಡಿಒಗೆ ನೀಡಲು ಸರ್ಕಾರ ಚಿಂತನೆ ನಡೆಸಿದೆಯೇ; (ವಿವರ ನೀಡುವುದು) | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ಮತ್ತು ನಿಯಮಗಳನ್ವಯ ಗ್ರಾಮ ಪಂಚಾಯತಿ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ನೀಡಲಾಗಿದೆ. |
| (ಉ) | ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಕಾಯಿದೆಗೆ ಪೂರಕವಾಗಿಲ್ಲದ ಪಂಚತಂತ್ರ 2.0 ತಂತ್ರಾಂಶದ ಅವಕಾಶಗಳನ್ನು ಅಂದರೆ ಸಾಮಾನ್ಯ ಸಭಾ ನಿಯಮಗಳು, ನಿರಾಕ್ಷೇಪಣಾ ಪತ್ರ ವ್ಯಾಪಾರ ಪರವಾನಗೆ ನವೀಕರಣ ಇತ್ಯಾದಿಗಳನ್ನು ಸರಿಪಡಿಸಲು ಸರ್ಕಾರದ ಕ್ರಮಗಳೇನು? (ವಿವರ ನೀಡುವುದು) | ನಿರಾಕ್ಷೇಪಣಾ ಪತ್ರ, ವ್ಯಾಪಾರ ಪರವಾನಿಗೆ ನವೀಕರಣ ಸಂಬಂಧಿಸಿದಂತೆ ನಿಯಮಗಳಲ್ಲಿ ಬದಲಾವಣೆ ತರಲಾಗಿದ್ದು, ಸಾಮಾನ್ಯ ಸಭಾ ನಿಯಮಗಳ ಬಗ್ಗೆ ನಿಯಮಗಳಲ್ಲಿ ಬದಲಾವಣೆ ತರಲಾಗುವುದು. |

ಸಂ:ಗ್ರಾಅಪ/168/ಇ-ಆಡಳಿತ/2023

(ಪ್ರಿಯಾಂಕ್ ಖರ್ಗೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

## ಅನುಬಂಧ-1

### ಪಂಚತಂತ್ರ 2.0

1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮ ಪಂಚಾಯತಿಗಳಲ್ಲಿಬಳಸಲಾಗುತ್ತಿರುವ ಪಂಚತಂತ್ರ 2.0 ತಂತ್ರಾಂಶದಲ್ಲಿ ಮುಖ್ಯವಾಗಿ ಪ್ರಸ್ತುತ ಆರ್ಥಿಕ ವರ್ಷದಲ್ಲಿ ತೆರಿಗೆ ನಿರ್ಧರಣೆ ಹಾಗೂ ತೆರಿಗೆ ವಸೂಲಾತಿಗಾಗಿ Automation of Property Tax ಮಾಡ್ಯುಲ್, ಸೇವೆಗಳ ವಿಲೇವಾರಿಗಾಗಿ ನಾಗರೀಕ ಸೇವೆ ಮಾಡ್ಯುಲ್, ದೂರದೃಷ್ಟಿ ಯೋಜನೆ ಪ್ರಕ್ರಿಯೆಗಳನ್ನು ಸಿದ್ಧಪಡಿಸಲು Planning Module ಹಾಗೂ ಗ್ರಾಮ ಪಂಚಾಯತಿಗಳ ಸಭೆಗಳಲ್ಲಿ ಪಾರದರ್ಶಕತೆ ತರಲು Meeting Management ಮಾಡ್ಯುಲ್‌ನ್ನು ಅಭಿವೃದ್ಧಿಪಡಿಸಲಾಗಿದೆ.
2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮ ಪಂಚಾಯತಿಗಳಲ್ಲಿ 2011 ರಿಂದ ಬಳಸಲಾಗುತ್ತಿರುವ ಪಂಚತಂತ್ರ ತಂತ್ರಾಂಶವನ್ನು ಉನ್ನತೀಕರಣಗೊಳಿಸಿ, ಅಭಿವೃದ್ಧಿಪಡಿಸಲಾಗಿರುವ ಪಂಚತಂತ್ರ 2.0 ತಂತ್ರಾಂಶವನ್ನು ಗ್ರಾಮ ಪಂಚಾಯತಿಗಳ ಪ್ರತಿನಿತ್ಯದ ಕಾರ್ಯಗಳನ್ನು ಮತ್ತು ಕಾರ್ಯಚಟುವಟಿಕೆಗಳನ್ನು ನಿರ್ವಹಣೆ ಮಾಡಲು ಹಾಗೂ ಸೇವೆಗಳ ವಿಲೇವಾರಿಗೆ ಬೇಕಾದ ಯೋಜನೆಗಳ ಅನುಷ್ಠಾನ ಮತ್ತು ತೀರ್ಮಾನಗಳನ್ನು ಕೈಗೊಳ್ಳಲು ಬಳಸಿಕೊಳ್ಳಲಾಗುತ್ತಿದೆ.

### ತೆರಿಗೆ ಸಂಗ್ರಹಣೆ

3. ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ವಸೂಲಾತಿ ಮಾಡಲು ಪಂಚತಂತ್ರ 2.0 ತಂತ್ರಾಂಶದ ಮೊಬೈಲ್ ಆಪ್‌ನ್ನು ಅಭಿವೃದ್ಧಿಪಡಿಸಿ, ಅನುಷ್ಠಾನಗೊಳಿಸಲಾಗಿದ್ದು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2021 ರನ್ವಯ ಗ್ರಾಮ ಪಂಚಾಯತಿಗಳ ತೆರಿಗೆ ದರ ಮತ್ತು ಫೀಜುಗಳನ್ನು ವಿಧಿಸಲು ಸ್ವಯಂಚಾಲಿತ ತೆರಿಗೆ ಲೆಕ್ಕಾಚಾರ ಮಾಡುವ ವಿಧಾನವನ್ನು ಸೆರೆಹಿಡಿಯಲು Automation of Property Tax ಮಾಡ್ಯುಲ್ ಅನ್ನು ಸದರಿ ತಂತ್ರಾಂಶದ "ತೆರಿಗೆ ಸಂಗ್ರಹಣೆ" ಮಾಡ್ಯುಲ್ ನಲ್ಲಿ ಅಭಿವೃದ್ಧಿಪಡಿಸಿ, ಅನುಷ್ಠಾನಗೊಳಿಸಲಾಗಿದೆ.
4. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ ನಿಯಮ 21 ರನ್ವಯ ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ವಸೂಲಾತಿ ಪ್ರಕ್ರಿಯೆಯಲ್ಲಿರುವ ಅವ್ಯವಹಾರಗಳನ್ನು ತಡೆಗಟ್ಟಿ, ಪಾರದರ್ಶಕತೆಯನ್ನು ಕಾಪಾಡುವ ಉದ್ದೇಶದಿಂದ ತೆರಿಗೆ, ದರ ಮತ್ತು ಫೀಜುಗಳನ್ನು ಸಂಗ್ರಹಣೆ ಮಾಡಲು ನಮೂನೆ-3ರಲ್ಲಿ ನಿಗಧಿಪಡಿಸಿರುವ ಮ್ಯಾನ್ಯುಯಲ್ ರಶೀದಿಗಳನ್ನು ನೀಡುವ ಬದಲು ಡಿಜಿಟಲ್ ರಶೀದಿಗಳನ್ನು ಸೃಜಿಸಿ, ಸಾರ್ವಜನಿಕರಿಗೆ ನೀಡಲು ಪಂಚತಂತ್ರ 2.0 ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.

### ಬಾಪೂಜಿ ಸೇವಾ ಕೇಂದ್ರ

5. ಸಾರ್ವಜನಿಕರು ಬಾಪೂಜಿ ಸೇವಾ ಕೇಂದ್ರ ತಂತ್ರಾಂಶದ ಮತ್ತು ಬಾಪೂಜಿ ಸೇವಾ ಕೇಂದ್ರ ಮೊಬೈಲ್ ಆಪ್ ಮೂಲಕ ಗ್ರಾಮ ಪಂಚಾಯತಿಗಳ ಆಸ್ತಿ ತೆರಿಗೆಯನ್ನು ಪಾವತಿಸಲು ಹಾಗೂ ಇಲಾಖೆಯ 17 ಸೇವೆಗಳಿಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ.